ಶೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) 1998-99ನೇ ಸಾಲಿನಲ್ಲಿ ಬೈಂದೂರು ವಿಧಾನ ಸಭಾ ಕ್ಷೇತ್ರಕ್ಕೆ ಸೇರಿದ 9 ಪರಿಶಿಷ್ಟ ಪಂಗಡಗಳ ಕಾಲೋನಿಗಳಿಗೆ ದಾರಿದೀಪ ಒದಗಿಸಲಾಗಿದೆ. 1999-2000ನೇ ಸಾಲಿನಲ್ಲಿ ಯಾವುದೇ ಪರಿಶಿಷ್ಟ ಪಂಗಡದವರ ಕಾಲೋನಿಗಳಿಗೆ ದಾರಿದೀಪ ಒದಗಿಸಿರುವುದಿಲ್ಲ.

(ಆ) ಈ ಬಗ್ಗೆ ಒಟ್ಟು ಬಂದಿರುವ ಅರ್ಜಿಗಳ ಸಂಖ್ಯೆ:10 ಹಾಗೂ ಇವುಗಳಲ್ಲಿ ಬಾಕಿ ಉಳಿದಿರುವ ಅರ್ಜಿಯ ಸಂಖ್ಯೆ ಒಂದು.

(ಇ) ಬಾಕಿ ಉಳಿದಿರುವ ಒಂದು ಪರಿಶಿಷ್ಟ ಪಂಗಡದ ಕಾಲೋನಿಯ ಕೆಲಸವನ್ನು ಪ್ರಸ್ತುತ 2000-2001ನೇ ಸಾಲಿನಲ್ಲಿ ನಿರ್ವಹಿಸಲಾಗುವುದು. ಪರಿಶಿಷ್ಟ ಜಾತಿಯವರ ಕಾಲೋನಿಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಪ್ರಸ್ತುತ ಇರುವುದಿಲ್ಲ.

ಭಾಗ್ಯ ಜ್ಯೋತಿ ಯೋಜನೆಯಡಿ ಮನೆಯೊಂದಕ್ಕೆ ಗುತ್ತಿಗೆದಾರನಿಗೆ ಹಣ ಪಾವತಿ ಮಾಡುವ ಕುರಿತು

1806 (2528) ಶ್ರೀ ಗೋಪಾಲ ಪೂಜಾರಿ. ಕೆ. (ಬೈಂದೂರು):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಭಾಗ್ಯ ಜ್ಯೋತಿ ಯೋಜನೆಯಡಿ ಮನೆಯೊಂದಕ್ಕೆ ಗುತ್ತಿಗೆದಾರನಿಗೆ ಎಷ್ಟು ಹಣ ಪಾವತಿ ಮಾಡಲಾಗುತ್ತಿದೆ;

(ಆ) ಕಳೆದ ಮೂರು ವರ್ಷದಲ್ಲಿ ಭಾಗ್ಯಜ್ಯೋತಿ ಯೋಜನೆಯಲ್ಲಿ ಮನೆಯೊಂದಕ್ಕೆ ಗುತ್ತಿಗೆದಾರನಿಗೆ ಸರ್ಕಾರ ಎಷ್ಟು ಹಣ ಪಾವತಿಸುತ್ತಿತ್ತು;

(ಇ) ಈ ಆರ್ಥಿಕ ವರ್ಷದಲ್ಲಿ ಎಷ್ಟು ಪಾವತಿ ಮಾಡಲಾಗುತ್ತಿದೆ?

ಶೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) ಭಾಗ್ಯಜ್ಯೋತಿ ಯೋಜನೆಯಡಿ ವಿದ್ಯುದ್ದೀಕರಣ ಕಾಮಗಾರಿಗಾಗಿ ಪ್ರಸ್ತುತ ಪ್ರತಿ ಮನೆಯೊಂದಕ್ಕೆ ರೂ. 511-00ಕ್ಕೆ ಮೀರದಂತೆ ವಿದ್ಯುದೀಕರಣ ವೆಚ್ಚವನ್ನು ಗುತ್ತಿಗೆದಾರರಿಗೆ ಪಾವತಿ ಮಾಡಲಾಗುತ್ತಿದೆ.

(ಆ) ಕಳೆದ ಮೂರು ವರ್ಷಗಳಲ್ಲಿ ಭಾಗ್ಯಜ್ಯೋತಿ ಯೋಜನೆಯಡಿ ಕೈಗೊಂಡ ವಿದ್ಯುದೀಕರಣ ಕಾಮಗಾರಿಗಾಗಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಪ್ರತಿ ಮನೆಯೊಂದಕ್ಕೆ ಕ.ವಿ.ಪ್ರ.ನಿ.ಯು ಪಾವತಿ ಮಾಡುತ್ತಿದ್ದ ಗರಿಷ್ಟ ಮೊತ್ತವು ಈ ಕೆಳಗಿನಂತಿದೆ.

1. 1998-99 - ರೂ.511-00
2.(ಎ) 1997-98 - ರೂ.511-00
(13-1-98ರಿಂದ ಅನ್ವಯವಾಗುತ್ತದೆ)

(ಬಿ) 1997-98 - ರೂ.171-00
(2-1-98ರವರೆಗೆ)

3. 1996-97 - ರೂ.471-00

(ಇ) ಪ್ರಸಕ್ತ ಆರ್ಥಿಕ ವರ್ಷದಲ್ಲಿ (ಅಂದರೆ 2000-01)ಯೂ ಸಹ ಭಾಗ್ಯಜ್ಯೋತಿ ಯೋಜನೆಯಡಿಯ ವಿದ್ಯುದೀಕರಣಕ್ಕೆ ಪ್ರತಿ ಮನೆಗೆ ರೂ. 511-00ಕ್ಕೆ ಮಿಾರದಂತೆ ಹಣ ಪಾವತಿ ಮಾಡಲಾಗುತ್ತಿದೆ.

ಬೈಂದೂರು ಕ್ಷೇತ್ರಕ್ಕೆ ವಿದ್ಯುತ್ ಹ್ಯಾಮ್ಲೆಟ್ ಯೋಜನೆ ಬಗ್ಗೆ

1809 (2531) ಶ್ರೀ ಗೋಪಾಲ ಪೂಜಾರಿ. ಕೆ. (ಬೈಂದೂರು):

ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ವಿದ್ಯುತ್ ಹ್ಯಾಮ್ಲೆಟ್ ಯೋಜನೆಯಲ್ಲಿ ಬೈಂದೂರು ಕ್ಷೇತ್ರಕ್ಕೆ ಈವರೆವಿಗೆ ಎಷ್ಟು ಪ್ರಸ್ತಾವನೆ;

(ಆ) ಎಷ್ಟು ಗ್ರಾಮಗಳು ಈ ಯೋಜನೆ ಅನುಷ್ಠಾನಗೊಳ್ಳಲು ಬಾಕಿ ಉಳಿದಿದೆ;

(ಇ) ಇದನ್ನು ಪೂರ್ಣಗೊಳಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ವೀರಕುಮಾರ ಪಾಟೀಲ್ (ಇಂಧನ ರಾಜ್ಯ ಸಚಿವರು)

(ಅ) ಬೈಂದೂರು ಕ್ಷೇತ್ರದಲ್ಲಿ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ಸಂಬಂಧಿಸಿದಂತೆ, 10 ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಮಂಜೂರಾತಿ ದೊರಕಿರುತ್ತದೆ.

(ಆ) ಮಂಜೂರಾತಿ ದೊರಕಿರುವ ಎಲ್ಲಾ 10 ಹ್ಯಾಮ್ಲೆಟ್‌ಗಳು ಈ ಯೋಜನೆಯ ಅನ್ವಯ ಅನುಷ್ಠಾನಕ್ಕಾಗಿ ಬಾಕಿ ಉಳಿದಿವೆ.

(ಇ) ಪ್ರಸಕ್ತ ವರ್ಷವಾದ 2000-2001ರಲ್ಲಿ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕೆ ತಾಲ್ಲೂಕುವಾರು ಗುರಿಗಳನ್ನು ನಿಗಧಿಪಡಿಸಿರಬೇಕಾಗುತ್ತದೆ. ಕುಂದಾಪುರ ತಾಲ್ಲೂಕಿಗೆ ಹ್ಯಾಮ್ಲೆಟ್‌ಗಳ ವಿದ್ಯುದೀಕರಣಕ್ಕಾಗಿ ನಿಗದಿಪಡಿಸಲಾಗುವ ಗುರಿಗೆ ತಕ್ಕಂತೆ ವಿದ್ಯುದೀಕರಣ ಕಾರ್ಯವನ್ನು ಕೈಗೊಳ್ಳಲು ಕ್ರಮ ಜರುಗಿಸಲಾಗುವುದು.

ಬೀದರ್‌ನ ನೀರಾವರಿ ಇಲಾಖೆಯಲ್ಲಿ ನಡೆದಿರುವ ಅವ್ಯವಹಾರಗಳು

1810 (2291) ಶ್ರೀ ಗುಂಡಪ್ಪ ವಕೀಲ್ (ಔರಾದ್):

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?